ಶ್ರೀ ಬಿ. ಎಚ್. ರಾಮೇಗೌಡ.—ಕರೀ ಕಂದಾಯವನ್ನೂ ಅರ್ಧ ವಜಾ ಮಾಡುತ್ತೇವೆಂದು ತಾವು ಹೇಳಿರಲಿಲ್ಲವೇ? ಮತ್ತು ಈರೀತಿ ಆರ್ಡರ್ ನಹಾ ಮಾಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ತರೀ ಕಂದಾಯವನ್ನು ಎಲ್ಲಾ ಕಡೆಯೂ ವಜಾಮಾಡುತ್ತೇವೆಂದು ಆರ್ಡರ್ ಮಾಡಿರಲಿಲ್ಲ. ಎಲ್ಲ ಕೆರೆಗೆ ನೀರು ಬಾರದೆ ಬೆಳೆಯಾಗುವುದಿಲ್ಲವೋ ಅಂಥ ಕೆರೆಯ ಜಮೀನುಗಳಿಗೆ ಮಾತ್ರ ಶೇಮಿರ್ಷ ಕೊಡಲಾಗುತ್ತದೆಂದು ಹೇಳಿದೆ.

ಶ್ರೀ ಬಿ. ಎಚ್. ರಾಮೇಗೌಡ. – ಎಷ್ಟೋ ಕೆರೆಗಳಿಗೆ ನೀರೇ ಬರಲಿಲ್ಲ. ಇನ್ನು ಕೆಲವು ಕೆರೆಗಳಲ್ಲಿ 3-4 ವರ್ಷಗಳಿಂದಲೂ ನೀರೇ ಬಾರದೆ ಬಹಳ ತೊಂದರೆಯಾಗಿದ್ದು ರಿಂದ ಖುಷ್ಕಿ ಭೂಮಿಗೆ ಕಂದಾಯ ಮಾಫಿಮಾಡಿದ್ದೀರಿ. ಅದೇ ರೀತಿ ತರೀ ಭೂಮಿಗೆ ಕಂದಾಯ ಮಾಫಿಯಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಪರ್ಯಾಲೋಚನೆಯಲ್ಲಿದೆ.

ಶ್ರೀ ಬಿ. ಎಚ್. ರಾಮೇಗೌಡ.—ಖುಷ್ಕಿ ಜಮೀನಿಗೆ ಕಂದಾಯ ಮಾಫಿಮಾಡಿ, ತರೀ ಕಂದಾಯವನ್ನೂ ಮಾಫಿಮಾಡತಕ್ಕ ಬಗ್ಗೆ ಆರ್ಡರು ಮಾಡುತ್ತೇವೆಂದು ತಿಳಿಸಿದ್ದೂ, ಇಲ್ಲಿಯವರೆಗೂ ಆರ್ಡರ್ ಮಾಡದಿರಲು ಕಾರಣವೇನು ?

Mr. SPEAKER.—It is understood. They are usually sanctioned. Any other question ?

ಶ್ರೀ ಬಿ. ಎಚ್. ರಾಮೇಗೌಡ.—1952-53ನೆಯ ಸಾಲಿನಲ್ಲಿ ಕಳ್ಳಂಬೆಳ್ಳ ಹೋಬಳಿ, ಬುಕ್ಕಾಪಟ್ಟಣ ಹೋಬಳಿಗಳಿಂದ ರೈತರು ಈ ಕಂದಾಯವನ್ನು ಮಾಫಿಮಾಡಬೇಕೆಂದು ಸರ್ಕಾರಕ್ಕೆ ಅರ್ಜಿಗಳನ್ನು ಹಾಕಿಕೊಂಡಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಉತ್ತರದಲ್ಲೇ ತಿಳಿಸಿದೆ. ತಾವು (ಛ) ಭಾಗದ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಈ ರಿಮಿಷ್ಟ ಸ್ಟೇಟ್‌ಮೆಂಟನ್ನು ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖಾಧಿಕಾರಿಗಳು ಯಾವಾಗ ಕಳುಹಿಸಿಕೊಡುತ್ತಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಮಾನ್ಯವಾಗಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಕಳುಹಿಸಿಕೊಡುತ್ತಾರೆ!

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ರಿಮಿಷ್ಟ ಬಗ್ಗೆ ರಿಪೋರ್ಟನ್ನು ಫೆಬ್ರವರಿ ಮಾರ್ಚ್ ತಿಂಗಳಿನಲ್ಲಿ ಕಳುಹಿಸಿದರೆ, ಅವರು ಪನೂರು ಪ್ರಾರಂಭಿಸುವುದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಕ್ಕೆ ಯಾವ ಸಾಲಿನಲ್ಲಿ, ಯಾವ ಪ್ರದೇಶದಲ್ಲಿ ಹಾಗೆ ಕಂದಾಯವನ್ನು ಮಾಫಿ ಮಾಡಬೇಕು ಎಂಬುದಾಗಿ ಜಿಲ್ಲಾಧಿಕಾರಿಗಳು ಶಿಫಾರಸು ಮಾಡುತ್ತಾರೋ, ಆಗ ತಕ್ಷಣವೇ ಸರ್ಕಾರ ಆಜ್ಞೆಯನ್ನು ಹೊರಡಿಸುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ರೈತರಿಗೆ ಇದು ಹೇಗೆ ಗೊತ್ತಾಗಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ತಾಲ್ಲೂಕು ಕಛೇರಿಗೆ ಹೋಗಿ ತಿಳಿದುಕೊಳ್ಳಬೇಕು.

Mr. SPEAKER.—The raiyats must thank the Government, if there is such an order.

Distress Relief Works in Gundlupet Taluk.

Q.—164. Sri SIDDIAH *alias* KUNNIAH (Gundlupet-Heggaddevankote—Scheduled Castes).—

Will the Government be pleased to state :—

(*a*) the items of work included under distress relief works in Gundlupet taluk ;

(*b*) whether the work relating to the road from Hangala to Hullepura has been included in the scheme ;

(*c*) the reasons for not yet starting the work of Bombalapur tank ?

A.—Sri KADIDAL MANJAPPA (Minister for Revenue and Public Works).—

(*a*) Fresh works started are as follows :—

	Estimated cost.	*Amount to be met from Village Panchayet funds.*	*From Distress Relief grants.*
	Rs.	Rs.	Rs.
(i) Deepening of 12 wells	6,135	1,135	5,000
(ii) Two Road Works	10,880	..	4,480
Total ..	..	..	9,480

For details, statement appended.

(*b*) Yes.

(*c*) The work is not included in the programme.

(SRI KADIDAL MANJAPPA.)

Statement showing the Programme of Distress Relief Works for the year 1953-54 in Gundlupet Taluk.

Gundlupet Taluk (*a*) *Deepening of wells*

Hobli.		*Village.*		*Estimated cost.*	*Village Panchayet's quota.*
				Rs.	Rs.
Kasaba	1	Kandagalada Hosahalli	.. ..	440	..
Do	2	Kelsurpura	.. ..	650	100
Do	3	Mallaiyanahandi	.. ..	475	..
Hangala	4	Bachalli	.. ..	360	..
Terakanambi	5	Balachavadi	.. ..	450	..
Do	6	Kaggala	.. ..	280	..
Do	7	Kodajoge	.. ..	480	100
Do	8	Bommanahalli	.. ..	350	..
Do	9	Terakanambi	.. ..	575	275
Begur	10	Kallahally	.. ..	1,300	325
Do	11	Agathagowdanahally	.. ..	400	200
Do	12	Madapatna	.. ..	375	135
		Total	.. ..	6,135	1,135

(*b*) *Road Works*:

1	Hangala to Hullepura	6,400	Estimate called from the Executive Engineer Nanjangud.
2	Lakkur to Balachawadi	4,480	
Total	.. ..	10,880	

ಶ್ರೀ ಎಚ್. ಕೆ. ಸಿದ್ದಯ್ಯ.—ಹಂಗಳದಿಂದ ಹುಲ್ಲೇಪುರಕ್ಕೆ ಹೋಗುವ ರಸ್ತೆ ಕಾಮಗಾರಿಯನ್ನು ಯಾವಾಗ ಕೈಕೊಳ್ಳುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲಿ: ಅದಷ್ಟು ಜಾಗ್ರತೆ ಮಾಡಿಸೋಣ.

ಶ್ರೀ ಎಚ್. ಕೆ. ಸಿದ್ದಯ್ಯ.—ಬೊಂಬ್ಲಾಪುರದ ಕೆರೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸುತ್ತೀರಿ?

Sri KADIDAL MANJAPPA.—As early as possible.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಹಂಗಳ-ಹುಲ್ಲೇಪುರದ ರಸ್ತೆ ಕಾಮಗಾರಿಗೆ 6,400 ರೂಪಾಯಿಗಳನ್ನು ಮಂಜೂರು ಮಾಡಿದ್ದರೂ ಏಕೆ provide ಮಾಡಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಈ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವು (ಬಿ) ಭಾಗಕ್ಕೆ ಕೊಟ್ಟಿರತಕ್ಕ ಉತ್ತರದಲ್ಲಿ ಸೇರಿಸಲಾಗಿದೆಯೆಂದು ಹೇಳಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಕೇಳುತ್ತಿದ್ದುದು ಅಂಗಳ ಎಂದು ಕೇಳಿಸಿತು. ಆದರೆ ಉತ್ತರದಲ್ಲಿ ಹಂಗಳ ಎಂದು ಇರುವುದೇ ಬೇರೆ ಏನೋ ಎಂದು ಹಾಗೆ ಹೇಳಿದೆ. ಇದರ ಎಸ್ಟಿಮೇಟ್ ಬಂದಿಲ್ಲ-ಬಂದ ಕೂಡಲೆ ಇದನ್ನು ಕೈ ಕೊಳ್ಳಲಾಗುತ್ತೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಬೊಂಬ್ಲಾಪುರದ ಕೆರೆ ಕಾಮಗಾರಿ ನಿಧಾನವಾಗಲು ಕಾರಣವೇನು ಸ್ವಾಮಿ ? ಕಳೆದ ಅಧಿವೇಶನದಲ್ಲೇ ಈ ಕೆಲಸವನ್ನು ರಿಲೀಫ್ ಕಾಮಗಾರಿಯಾಗಿ ತೆಗೆದುಕೊಂಡು ಮಾಡಿಸುವುದಾಗಿ ತಾವು ತಿಳಿಸಿರಲಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ನನಗೆ ಜ್ಞಾಪಕ ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಗುಂಡ್ಲುಪೇಟೆ ತಾಲ್ಲೂಕನ್ನು 'ಡಿಸ್ಟ್ರೆಸ್' ಏರಿಯಾ' ಎಂದು ಪರಿಗಣಿಸಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಚೆನ್ನಾಗಿ ಮಳೆಯಾಗಿರುತ್ತದೆ. ಆಲ್ಲಯ ಸ್ಥಿತಿಗತಿಗಳು ಚೆನ್ನಾಗಿರಿಬಹುದೆಂದು ಪರಿಗಣಿಸಲಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾವೀಗ ದಿಸ್ಟ್ರೆಸ್ ಏರಿಯಾ ಎಂದು ಭಾವಿಸಿ ಕೊಟ್ಟಿರತಕ್ಕ ಗ್ಯಾರಂಟಿನ ಮೊಬಲಗಿನಿಂದ ಜನರಿಗೆ ಸಾಕಷ್ಟು ಸಹಾಯ ದೊರೆತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವಶ್ಯಕತೆ ಬಿದ್ದರೆ ಇನ್ನೂ ಕೊಡಿಸೋಣ.